**D**

SL. No. : CCC

ಒಟ್ಟು ಪ್ರಶ್ನೆಗಳ ಸಂಖ್ಯೆ : 10 + 8 ]

Total No. of Questions : 10 + 8 ]

**CCE PF**
**CCE PR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4

[ Total No. of Printed Pages : 4

**ಸಂಕೇತ ಸಂಖ್ಯೆ : 98-K**

**Code No. : 98-K**

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಪ್ರಾಯೋಗಿಕ ವಿಭಾಗ

# Subject : CARNATIC MUSIC / HINDUSTANI MUSIC — PRACTICAL

**( ಕನ್ನಡ ಭಾಷಾಂತರ / Kannada Version )**

**( ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater )**

**( ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು )**

ದಿನಾಂಕ : 02. 04. 2019 ] [ Date : 02. 04. 2019

ಸಮಯ : 1 ಗಂಟೆ 30 ನಿಮಿಷಗಳು ] [ Time : 1 hour 30 minutes

ಗರಿಷ್ಠ ಅಂಕಗಳು : 50 ] [ Max. Marks : 50

## *ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 10 + 8 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿ ಕತ್ತರಿಸಿ

**Tear here**

# (ಕರ್ನಾಟಕ ಸಂಗೀತ)

1. 4 ನೆಯ ಸರಳೆಯನ್ನು 3 ಕಾಲಗಳಲ್ಲಿ ಹಾಡಲು ಹೇಳುವುದು. 5

2. ರೂಪಕ ತಾಳದ ಅಲಂಕಾರವನ್ನು 3 ಕಾಲಗಳಲ್ಲಿ ಹಾಡಿಸಿ, ಆ ತಾಳಕ್ಕೆ ಬರುವ ಲಘು, ಧ್ರುತದ ಬಗ್ಗೆ ತಿಳಿಸಲು ಹೇಳುವುದು. 4 + 1

3. ತ್ರಿಪುಟ ತಾಳದ ಒಂದು ಪಿಳ್ಳಾರಿ ಗೀತೆಯನ್ನು ಹಾಡಿಸಿ, ಆ ತಾಳದ ಬಗ್ಗೆ ವಿವರಿಸಲು ಹೇಳುವುದು. 4 + 1

4. ಮೋಹನರಾಗದ ಸಂಚಾರಿ ಗೀತೆಯನ್ನು ಹಾಡಿಸಿ, ಆ ರಾಗಕ್ಕೆ ಬರುವ ವಿಕೃತಿ ಸ್ವರಗಳನ್ನು ವಿವರಿಸಲು ಹೇಳುವುದು. 4 + 1

5. ಯಾವುದಾದರೂ ಒಂದು ಜತಿಸ್ವರವನ್ನು ಹಾಡಿಸುವುದು ಮತ್ತು ತಾಳಕ್ಕೆ ಸ್ವರವು ಹೇಗೆ ಹೊಂದಾಣಿಕೆಯಾಗುತ್ತವೆಂಬುದನ್ನು ಸಮರ್ಥಿಸುವುದು. 4 + 1

6. ಧೀರ ಶಂಕರಾಭರಣದಲ್ಲಿನ ತಾನವರ್ಣದ ಪೂರ್ವಾರ್ಧವನ್ನು ಹಾಡಿಸುವುದು ಮತ್ತು ಶಂಕರಾಭರಣ ರಾಗವು ಕಲ್ಯಾಣಿ ರಾಗಕ್ಕಿಂತ ಹೇಗೆ ಭಿನ್ನವಾಗಿದೆ ಎಂದು ಕೇಳುವುದು. 4 + 1

7. ಪ್ರತಿಮಧ್ಯಮ ರಾಗದ ಮಧ್ಯಮ ಕಾಲದ ಕೃತಿಯನ್ನು ಹಾಡಿಸುವುದು ಮತ್ತು ಶುದ್ಧ ಮಧ್ಯಮಕ್ಕಿಂತ ಪ್ರತಿಮಧ್ಯಮವು ಹೇಗೆ ಭಿನ್ನವಾಗಿದೆ ಎಂದು ಕೇಳುವುದು. 4 + 1

8. ಪಲ್ಲವಿ ಮತ್ತು ಚರಣಗಳೊಂದಿಗೆ ಜನಕರಾಗದ ವಿಳಂಬ ಕಾಲದ ಕೃತಿಯನ್ನು ಹಾಡಲು ಹೇಳುವುದು ಮತ್ತು ಪಲ್ಲವಿ, ಚರಣಕ್ಕಿರುವ ಭಿನ್ನತೆಯನ್ನು ಕೇಳುವುದು. 4 + 1

9. ಒಂದು ದಾಸರ ಕೀರ್ತನೆಯನ್ನು ಹಾಡಿಸುವುದು ಮತ್ತು ಕೀರ್ತನೆ ಎಂದರೇನು ಎಂದು ಕೇಳುವುದು. 4 + 1

10. ಒಂದು ವಚನವನ್ನು ಹಾಡಿಸುವುದು ಮತ್ತು ವಚನ ಎಂದರೇನು ಎಂದು ಕೇಳುವುದು. 4 + 1

# (ಹಿಂದೂಸ್ಥಾನಿ ಸಂಗೀತ)

ಪರೀಕ್ಷಕರು ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳುವುದು.

1. ನಿಮಗೆ ಗೊತ್ತಿರುವ ಸರಳೆ ಸ್ವರಗಳಲ್ಲಿ ಒಂದನ್ನು ಠಾಯ್, ದುಗುಣ್ ಮತ್ತು ಚೌಗುಣ್ ಕಾಲದಲ್ಲಿ ಹಾಡುವುದು. $1 \times 5 = 5$

2. ನಿಮಗೆ ಗೊತ್ತಿರುವ ಯಾವುದಾದರೊಂದು ಅಲಂಕಾರವನ್ನು ಠಾಯ್ ಮತ್ತು ದುಗುಣ್ ಕಾಲದಲ್ಲಿ ಹಾಡುವುದು. $1 \times 5 = 5$

3. ದುರ್ಗಾ ರಾಗದ ಸ್ವರಗೀತೆಯನ್ನು ತೀನ್ ತಾಳದಲ್ಲಿ ಹಾಡಿರಿ. ಸ್ವರಗೀತೆಗೂ ಮತ್ತು ಲಕ್ಷಣಗೀತೆಗೂ ಇರುವ ವ್ಯತ್ಯಾಸವನ್ನು ತಿಳಿಸಿ. $1 \times 5 = 5$

4. ನಿಮಗೆ ಗೊತ್ತಿರುವ ಯಾವುದಾದರೊಂದು ರಾಗದ ಲಕ್ಷಣಗೀತೆಯನ್ನು ಹಾಡಿರಿ. ಭೈರವ್ ರಾಗದ ಲಕ್ಷಣ ಮತ್ತು ಬಿಬಾಸ್ ರಾಗಲಕ್ಷಣಕ್ಕಿರುವ ಒಂದು ವ್ಯತ್ಯಾಸವನ್ನು ತಿಳಿಸಿ. $1 \times 10 = 10$

5. ಕನ್ನಡದ ಮೂರು ಮಂದಿ ವಚನಕಾರರ ಹೆಸರು ಮತ್ತು ಅಂಕಿತನಾಮಗಳನ್ನು ತಿಳಿಸಿ. $1 \times 5 = 5$

6. ಪುರಂದರದಾಸರು, ಕನಕದಾಸರು ಅಥವಾ ಶ್ರೀಪಾದರಾಜರ ಗೀತೆಯೊಂದನ್ನು ಹಾಡುವುದು. $1 \times 5 = 5$

7. ನಿಮಗೆ ಗೊತ್ತಿರುವ ಯಾವುದಾದರೊಂದು ರಾಗದ ಛೋಟಾಖ್ಯಾಲನ್ನು ಆಲಾಪ್ ತಾನ್‌ಗಳೊಂದಿಗೆ ಹಾಡುವುದು. $1 \times 10 = 10$

8. ದಾದರಾ ತಾಳದ ಮಾಹಿತಿಯನ್ನು ಠೇಕಾದೊಂದಿಗೆ ವಿವರಿಸಿ. ತಾಳವನ್ನು ಕೈಯಲ್ಲಿ ಹಾಕಿ ತೋರಿಸಿ. $1 \times 5 = 5$